# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** Vydehi Institute of Physiotherapy, Bengaluru ಈ ಕಾಲೇಜಿನಲ್ಲಿ 2025-26ನೇ ಸಾಲಿನಿಂದ ಬಿಪಿಟಿ ಕೋರ್ಸಿನ ಪ್ರವೇಶಮಿತಿಯನ್ನು ಹೆಚ್ಚಿಸುವ ಹಾಗೂ ಹೊಸದಾಗಿ ಎಂಪಿಟಿ ಕೋರ್ಸ್‌ನೊಂದಿಗೆ ಪ್ರಾರಂಭಿಸಲು ಸಂಯೋಜನೆ ನೀಡುವ ಬಗ್ಗೆ.

**ಓದಲಾಗಿದೆ:** ಕುಲಸಚಿವರು, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು ಇವರ ಏಕಕಡತ ಸಂಖ್ಯೆ: 1882301.

* * * * *

**ಪ್ರಸ್ತಾವನೆ:**

ಮೇಲೆ ಓದಲಾದ ಏಕಕಡತದಲ್ಲಿ ಕುಲಸಚಿವರು, ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು ಇವರ Srinivasa Trust ಇವರ Vydehi Institute of Physiotherapy, Bengaluru ಈ ಕಾಲೇಜಿನಲ್ಲಿ BPT ಕೋರ್ಸಿನ ಪ್ರವೇಶಮಿತಿಯನ್ನು 40 ರಿಂದ 100 ಸೀಟುಗಳಿಗೆ ಹೆಚ್ಚಿಸುವ ಮತ್ತು ತಲಾ 03 ಸೀಟುಗಳ ಪ್ರವೇಶಮಿತಿಯೊಂದಿಗೆ MPT Course ಗಳಾದ Musculo-Skeletal Sciences, Neurological Sciences, Sports Sciences, Paediatrics ಮತ್ತು Cardio Vascular & Pulmonary Sciences ಕೋರ್ಸ್‌ಗಳನ್ನು ಹೊಸದಾಗಿ ಪ್ರಾರಂಭಿಸಲು ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಅಧಿನಿಯಮ, 1994ರ ಕಲಂ 45(2)ರಡಿ ಸಲ್ಲಿಸಿದ್ದ ಅರ್ಜಿಯನ್ನು, ಸ್ಥಳೀಯ ತಪಾಸಣಾ ಸಮಿತಿಯ ವರದಿ, ಅಕಾಡಮಿಕ್ ಕೌನ್ಸಿಲ್ ಮತ್ತು ಸಿಂಡಿಕೇಟ್‌ನ ಶಿಫಾರಸ್ಸುಗಳನ್ನು ಸಲ್ಲಿಸುತ್ತಾ, ಈ ಸಂಸ್ಥೆಯಲ್ಲಿ 2025-26ನೇ ಸಾಲಿನಿಂದ BPT ಕೋರ್ಸಿನ ಪ್ರವೇಶಮಿತಿಯನ್ನು ಹೆಚ್ಚಿಸಲು ಹಾಗೂ ಮೇಲ್ಕಂಡ MPT ಕೋರ್ಸ್‌ಗಳೊಂದಿಗೆ ಹೊಸದಾಗಿ ಪ್ರಾರಂಭಿಸಲು ಸಂಯೋಜನೆ ನೀಡುವಂತೆ ಕೋರಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯನ್ನು ಸಂಬಂಧಿಸಿದ ದಾಖಲೆಗಳೊಂದಿಗೆ ಕೂಲಂಕಷವಾಗಿ ದಿನಾಂಕ: 19.09.2025 ರಂದು ನಡೆದ ಉನ್ನತಾಧಿಕಾರಿ ಸಮಿತಿ ಸಭೆಯಲ್ಲಿ ಪರಿಶೀಲಿಸಿದ ನಂತರ Srinivasa Trust ಇವರ Vydehi Institute of Physiotherapy, No. 82, EPIP Area, Nallurahalli, Whitefield, Bengaluru-560066, ಈ ಕಾಲೇಜಿನಲ್ಲಿ 2025-26ನೇ ಸಾಲಿನಿಂದ BPT ಕೋರ್ಸಿನ ಪ್ರವೇಶಮಿತಿಯನ್ನು 40 ರಿಂದ 100 ಸೀಟುಗಳಿಗೆ ಹೆಚ್ಚಿಸಲು ಮತ್ತು ತಲಾ 03 ಸೀಟುಗಳ ಪ್ರವೇಶಮಿತಿಯೊಂದಿಗೆ MPT Course ಗಳಾದ Musculo-Skeletal Sciences, Neurological Sciences, Sports Sciences, Paediatrics ಮತ್ತು Cardio Vascular & Pulmonary Sciences ಕೋರ್ಸ್‌ಗಳೊಂದಿಗೆ ಹೊಸದಾಗಿ ಪ್ರಾರಂಭಿಸಲು ಸಂಯೋಜನೆ ನೀಡಲು ಸರ್ಕಾರವು ತೀರ್ಮಾನಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಎಂಇಡಿ 278 ಆರ್ ಜಿ ಯು 2025, ಬೆಂಗಳೂರು, ದಿನಾಂಕ:26.09.2025**

ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಅಧಿನಿಯಮ, 1994ರ ಕಲಂ 45(5)ರಡಿ ಪದತ್ತವಾದ ಅಧಿಕಾರವನ್ನು ಚಲಾಯಿಸಿ, Srinivasa Trust ಇವರ Vydehi Institute of Physiotherapy, No. 82, EPIP Area, Nallurahalli, Whitefield, Bengaluru-560066 ಈ ಕಾಲೇಜಿನಲ್ಲಿ 2025-26ನೇ ಸಾಲಿನಿಂದ BPT ಕೋರ್ಸಿನ ಪ್ರವೇಶಮಿತಿಯನ್ನು ಫಿಸಿಯೋಥೆರಪಿ ಹೆಚ್ಚಿಸಿ ಮತ್ತು ಈ ಕೆಳಕಂಡ ಪಟ್ಟಿಯಲ್ಲಿ ನಮೂದಿಸಿರುವ ಪ್ರವೇಶಮಿತಿಗೊಳ್ಳಪಟ್ಟು MPT ಕೋರ್ಸ್‌ಗಳೊಂದಿಗೆ ಪ್ರಾರಂಭಿಸಲು ಈ ಮುಂದಿನ ಷರತ್ತಿಗೊಳಪಟ್ಟು ಸಂಯೋಜನೆಯನ್ನು ನೀಡಿ ಆದೇಶಿಸಿದೆ.

| Sl.No | Courses | Intake Seats |
|---|---|---|
| 1. | BPT Course | 40-100 seats |
| 2. | MPT Musculo Skeletal Sciences | 03 Seats |
| 3. | MPT Neurological Sciences | 03 Seats |

| | | |
|---|---|---|
| 4. | MPT Sports Sciences | 03 Seats |
| 5. | MPT Paediatrics | 03 Seats |
| 6. | MPT Cardio Vascular & Pulmonary Sciences | 03 Seats |

**ಷರತ್ತು ಮತ್ತು ನಿಬಂಧನೆಗಳು**

1. ಸರ್ಕಾರದ ಆದೇಶ ಹೊರಡಿಸಿದ ನಂತರ ಅಂದರೆ, 2025-26ನೇ ಶೈಕ್ಷಣಿಕ ಸಾಲಿನಿಂದ ಕೋರ್ಸನ್ನು ಪ್ರಾರಂಭಿಸತಕ್ಕದ್ದು.
2. ಈ ಸಂಸ್ಥೆಯು ಮೇಲ್ಕಂಡ ಬಿಪಿಟಿ ಕೋರ್ಸಿನ ಶೇ.20 ರಷ್ಟು ಮತ್ತು ಎಂಪಿಟಿ ಕೋರ್ಸಿನ ಶೇ.25 ರಷ್ಟು ಸೀಟುಗಳನ್ನು ಸರ್ಕಾರಕ್ಕೆ ಹಂಚಿಕೆಗಾಗಿ ಬಿಟ್ಟುಕೊಡತಕ್ಕದ್ದು.
3. ಮೇಲ್ಕಂಡ ಕೋರ್ಸುಗಳ ಸಂಯೋಜನೆಗೆ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಮಂಜೂರಾತಿಯನ್ನು ಪಡೆಯತಕ್ಕದ್ದು.
4. ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯವು ನಿಗದಿ ಪಡಿಸಿರುವ ಪರಿನಿಯಮಾವಳಿಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು. ಸದರಿ ಟ್ರಸ್ಟ್/ಸಂಸ್ಥೆ/ಸಂಘ/ ಇತ್ಯಾದಿ ಫಿಸಿಯೋಥೆರಪಿ ಕಾಲೇಜುಗಳನ್ನು ಪ್ರಾರಂಭಿಸಲು ನಿಯಮಾನುಸಾರ ಅಗತ್ಯವಿರುವ ಕಟ್ಟಡ/ಮೂಲಭೂತ ಸೌಲಭ್ಯಗಳನ್ನು ಹೊಂದಿರುವ ಬಗ್ಗೆ ಸಂಬಂಧಪಟ್ಟ ಪ್ರಾಧಿಕಾರದಿಂದ ವಿಶ್ವವಿದ್ಯಾಲಯವು ಖಚಿತಪಡಿಸಿಕೊಳ್ಳತಕ್ಕದ್ದು.
5. ಸದರಿ ಸಂಸ್ಥೆಯು ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಅನುಮೋದನೆ ಪಡೆದ ನಂತರವೇ, ನಿಗಧಿಪಡಿಸಿರುವ ವಿದ್ಯಾರ್ಥಿಗಳ ಪ್ರವೇಶ ಪಡೆಯತಕ್ಕದ್ದು. ಯಾವುದೇ ಕಾರಣಕ್ಕು ಹೆಚ್ಚುವರಿ ವಿದ್ಯಾರ್ಥಿ ಪ್ರವೇಶ ಪಡೆಯತಕ್ಕದ್ದಲ್ಲ. ಇದನ್ನು ಉಲ್ಲಂಘಿಸಿದ್ದಲ್ಲಿ 1991 ರ ಕರ್ನಾಟಕ ಮಾನ್ಯತೆ ರಹಿತ ಮತ್ತು ಅಸಂಯೋಜಿತ ಶಿಕ್ಷಣ ಸಂಸ್ಥೆಗಳಿಗೆ ವಿದ್ಯಾರ್ಥಿಗಳ ಪ್ರವೇಶ ನಿಷೇಧ, ಅಧಿನಿಯಮದಡಿ ಕ್ರಿಮಿನಲ್ ಮೊಕದ್ದಮೆ ಹೂಡಲಾಗುವುದು.
6. ರಾಜ್ಯ ಸರ್ಕಾರ ಮತ್ತು ವಿಶ್ವವಿದ್ಯಾಲಯವು ಕಾಲಕಾಲಕ್ಕೆ ನೀಡುವ ಸೂಚನೆ ಹಾಗೂ ಆದೇಶಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.
7. ಸದರಿ ಸಂಸ್ಥೆಯು ಸ್ವಂತ ಆಸ್ಪತ್ರೆಯನ್ನು ಸರ್ಕಾರ ನಿಗಧಿಪಡಿಸಿದ ಕಾಲಮಿತಿಯಲ್ಲಿ ಹೊಂದತಕ್ಕದ್ದು. ತಪ್ಪಿದಲ್ಲಿ ಕಾಲೇಜಿನ ಸಂಯೋಜನೆಯನ್ನು ಹಿಂತೆಗೆದುಕೊಳ್ಳಲಾಗುವುದು.
8. ವಿದ್ಯಾರ್ಥಿಗಳ ಪ್ರವೇಶವನ್ನು 2003ರ ಕರ್ನಾಟಕ ನರ್ಸಿಂಗ್, ಫಾರ್ಮಸಿ ಮತ್ತು ಫಿಜಿಯೋಥೆರಪಿ ಕೋರ್ಸುಗಳ ಪ್ರವೇಶಕ್ಕೆ ಅಭ್ಯರ್ಥಿಗಳ ಆಯ್ಕೆ ನಿಯಮಾವಳಿ ಹಾಗೂ ಸರ್ಕಾರವು ಕಾಲಕಾಲಕ್ಕೆ ಮೇಲ್ಕಂಡ ಕೋರ್ಸಿನ ಪ್ರವೇಶಕ್ಕೆ ಸರ್ಕಾರಿ ಕೋಟಾದ ಮತ್ತು ಮ್ಯಾನೇಜ್‌ಮೆಂಟ್ ಕೋಟಾದ ನಿರ್ದಿಷ್ಟ ಅನುಪಾತದಲ್ಲಿ ಪ್ರತಿಬಂದಿಸುವ ಪ್ರಕಾರವೇ ಮಾಡತಕ್ಕದ್ದು.
9. ಮೇಲ್ಕಂಡ ಸಂಸ್ಥೆಗೆ ಕರ್ನಾಟಕ ಸರ್ಕಾರದ ವತಿಯಿಂದ ಯಾವುದೇ ರೀತಿಯ ಅನುದಾನ, ಆರ್ಥಿಕ ಸೌಲಭ್ಯಗಳನ್ನು ನೀಡಲಾಗುವುದಿಲ್ಲ. ಇದು ಶಾಶ್ವತ ಅನುದಾನ ರಹಿತ ಸಂಸ್ಥೆಯಾಗಿರುವ ಷರತ್ತಿಗೆ ಒಳಪಟ್ಟಿರುತ್ತದೆ.
10. ಟ್ರಸ್ಟ್/ಸಂಸ್ಥೆ/ಸಂಘ/ಇತ್ಯಾದಿ ಚಾಲ್ತಿಯಲ್ಲಿರುವ ಬಗ್ಗೆ ಸಂಬಂಧಪಟ್ಟ ಪ್ರಾಧಿಕಾರದಿಂದ ವಿಶ್ವವಿದ್ಯಾಲಯವು ಖಚಿತಪಡಿಸಿಕೊಳ್ಳತಕ್ಕದ್ದು.
11. ಟ್ರಸ್ಟ್/ಸಂಸ್ಥೆ/ಸಂಘಗಳು/ಇತ್ಯಾದಿಗಳನ್ನು ಬೇರೆಯವರಿಂದ ಖರೀದಿ/ಮಾರಾಟ ಮಾಡಿರುವುದಿಲ್ಲವೆಂಬ ಬಗ್ಗೆ ಹಾಗೂ ನಿಯಮ ಉಲ್ಲಂಘನೆಯಾಗಿ ಮೂಲ ಟ್ರಸ್ಟಿಗಳಲ್ಲಿ ಯಾವುದೇ ಬದಲಾವಣೆಯಾಗಿಲ್ಲದೆ ಇರುವ ಬಗ್ಗೆ ಸಂಬಂಧಪಟ್ಟ ಪ್ರಾಧಿಕಾರದಿಂದ ವಿಶ್ವವಿದ್ಯಾಲಯವು ಖಚಿತಪಡಿಸಿಕೊಳ್ಳತಕ್ಕದ್ದು
12. ಸದರಿ ಫಿಸಿಯೋಥೆರಪಿ ಕಾಲೇಜನ್ನು ಪ್ರಾರಂಭಿಸಲು ಸ್ವಂತ ಆಸ್ಪತ್ರೆಯ ಸಮರ್ಪಕ ಕ್ಲಿನಿಕಲ್‌ಸೌಲಭ್ಯ ಹೊಂದಿರುವ ಬಗ್ಗೆ ಹಾಗೂ ಸದರಿ ಆಸ್ಪತ್ರೆ ನಿಯಮಾನುಸಾರ ಹಾಸಿಗೆ ಸಾಮರ್ಥ್ಯವನ್ನು ಹೊಂದಿರುವ ಬಗ್ಗೆ ಸಂಬಂಧಪಟ್ಟ ಪ್ರಾಧಿಕಾರದಿಂದ ವಿಶ್ವವಿದ್ಯಾಲಯವು ಖಚಿತಪಡಿಸಿಕೊಳ್ಳತಕ್ಕದ್ದು.
13. ಸದರಿ ಫಿಸಿಯೋಥೆರಪಿ ಕಾಲೇಜನ್ನು ಪ್ರಾರಂಭಿಸಲು ನೀಡಿದ ಬೋಧಕ/ಬೋಧಕೇತರ ಸಿಬ್ಬಂದಿಯ ಬೇರೆ ಯಾವುದೇ ಸಂಸ್ಥೆಗಳಲ್ಲಿ ಪುನರಾವರ್ತನೆ ಆಗದಂತೆ ಆಧಾರ ಲಿಂಕ್‌ಹಾಜರಾತಿ ಹೊಂದಿರುವ ಬಗ್ಗೆ ವಿಶ್ವವಿದ್ಯಾಲಯವು ಖಚಿತಪಡಿಸಿಕೊಳ್ಳತಕ್ಕದ್ದು.
14. ಸದರಿ ಫಿಸಿಯೋಥೆರಪಿ ಕಾಲೇಜು ಸಂಬಂಧಪಟ್ಟ ಪ್ರಾಧಿಕಾರಗಳು ನಿಯಮಾನುಸಾರ ನಿಗದಿಪಡಿಸಿರುವ ಶುಲ್ಕವನ್ನು ವಿದ್ಯಾರ್ಥಿಗಳಿಂದ ಪಡೆದುಕೊಳ್ಳತಕ್ಕದ್ದು. ಹೆಚ್ಚುವರಿ ಶುಲ್ಕ ಪಡೆದ್ದಲ್ಲಿ, ಸಂಬಂಧಪಟ್ಟ ಫಿಸಿಯೋಥೆರಪಿ ಕಾಲೇಜಿನ ಸಂಯೋಜನೆಯನ್ನು ಹಿಂಪಡೆದು, ವಿಶ್ವವಿದ್ಯಾಲಯವು ಕಾನೂನು ಕ್ರಮಕೈಗೊಳ್ಳತಕ್ಕದ್ದು.

15. ಸದರಿ ಸಂಸ್ಥೆಯು ಮೇಲ್ಕಂಡ ಯಾವುದೇ ಷರತ್ತನ್ನು ಉಲ್ಲಂಘಿಸಿದಲ್ಲಿ, 1994 ರ ರಾಜೀವ್ ಗಾಂದಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಅದಿನಿಯಮದ 48 ನೇ ಪ್ರಕರಣದಲ್ಲಿ ಪ್ರಸ್ತುತ ಸದರಿ ಸಂಸ್ಥೆಗೆ ನೀಡಲಾಗಿರುವ ಸಂಯೋಜನೆಯನ್ನು ಹಿಂತೆಗೆದುಕೊಳ್ಳಲಾಗುವುದು.`
16. ಪ್ರತಿ ಸಂಸ್ಥೆಯಲ್ಲಿನ ಮಾನವ ಸಂಪನ್ಮೂಲದ ವಿವರಗಳನ್ನು ಆಯಾ ಸಂಸ್ಥೆಗಳ ವೆಬ್‌ಸೈಟ್‌ನಲ್ಲಿ ಕಡ್ಡಾಯವಾಗಿ ಪ್ರಕಟಿಸುವುದು. ಒಂದೇ ಸಿಬ್ಬಂದಿಯನ್ನು ಬೇರೆ-ಬೇರೆ ಸಂಸ್ಥೆಗಳಲ್ಲಿ ತೋರಿಸದಂತೆ ಕ್ರಮವಹಿಸತಕ್ಕದ್ದು.ಈ ಬಗ್ಗೆ ವೇತನ ಚೀಟಿ ಹಾಗೂ ಫಾರ್ಮ್‌ನ್ನು ಪರಿಶೀಲಿಸತಕ್ಕದ್ದು.
17. ಪ್ರತಿ ಕಾಲೇಜುಗಳು (ಪಿಸಿಯೋಥೆರಾಪಿ, ಅಲೈಡ್ ಹೆಲ್ತ್ ಸೈನ್ಸಸ್, ನರ್ಸಿಂಗ್ ಕಾಲೇಜ) ಪ್ರತ್ಯೇಕ ಕಟ್ಟಡ ಹಾಗೂ ಮೂಲಭೂತ ಸೌಕರ್ಯಗಳನ್ನು ಹೊಂದತಕ್ಕದ್ದು. ಮೂಲಭೂತ ಸೌಲಭ್ಯಗಳ ಬಗ್ಗೆ ಜಿಯೋ-ಟ್ಯಾಗಿಂಗ್ ಮಾಡುವುದು.
18. ಮೇಲ್ಕಂಡ ಸಂಸ್ಥೆಗಳ ಬಗ್ಗೆ ಐಎನ್‌ಸಿ ಮಾರ್ಗಸೂಚಿಯಲ್ಲಿನ ಯಾವುದೇ ಸೌಲಭ್ಯಗಳ ಬಗ್ಗೆ ಕೊರತೆ ಕಂಡುಬಂದಲ್ಲಿ ಸ್ಥಳ ತಪಾಸಣಾ ಸಮಿತಿ ಹಾಗೂ ಆರ್‌ಜಿಯುಹೆಚ್‌ಎಸ್‌ಗಳೇ ನೇರ ಹೊಣೆಗಾರರಾಗತಕ್ಕದ್ದು.
19. ಸಂಸ್ಥೆಗಳು ಕ್ಲಿನಿಕಲ್ ಸೌಲಭ್ಯದ ಸಂಬಂಧ ತೋರಿಸಿರುವ ಆಸ್ಪತ್ರೆಗಳಲ್ಲಿ ಇರುವ OPD/IPD ಮಾಹಿತಿಯನ್ನು ನಮೂದಿಸತಕ್ಕದ್ದು.
20. ಮಾರ್ಗಸೂಚಿಯನ್ವಯ ಮೂಲಭೂತ ಸೌಲಭ್ಯಗಳನ್ನು ಹೊಂದಿರುವ ಬಗ್ಗೆ ಕಾಲಕಾಲಕ್ಕೆ ಖಚಿತಪಡಿಸಿಕೊಳ್ಳತಕ್ಕದ್ದು.
21. ಮುಂದಿನ ದಿನಗಳಲ್ಲಿ ಸ್ಥಳ ತಪಾಸಣೆ ಮಾಡುವಾಗ ಆರ್‌ಜಿಯುಹೆಚ್‌ಎಸ್, ಪ್ಯಾರಾ ಮೆಡಿಕಲ್‌ಬೋರ್ಡ್‌ಮತ್ತು ಕೆಎನ್‌ಸಿ ಪ್ರಾಧಿಕಾರಗಳ ಸಮನ್ವಯದೊಂದಿಗೆ ಸ್ಥಳ ತಪಾಸಣೆ ನಡೆಸತಕ್ಕದ್ದು.
22. ಸದರಿ ಸಂಸ್ಥೆಯ ಪ್ರವೇಶಮಿತಿಯ ಬಗ್ಗೆ ಬೋಧಕ ಸಿಬ್ಬಂದಿಗಳ ವಿವರಗಳನ್ನು ನೊಂದಣಿ ಸಂಖ್ಯೆಯನ್ನು ಒಳಗೊಂಡಂತೆ ಸಂಸ್ಥೆಯ ಹಾಗೂ ಆರ್‌ಜಿಯುಹೆಚ್‌ಎಸ್‌ನ ವೆಬ್‌ಸೈಟ್‌ನಲ್ಲಿ ಪ್ರಕಟಿಸತಕ್ಕದ್ದು.
23. ಸದರಿ ಸಂಸ್ಥೆಯ ವಿದ್ಯಾರ್ಥಿಗಳ ಹಾಜರಾತಿಯನ್ನು ಬಯೋಮೆಟ್ರಿಕ್‌ನಲ್ಲಿ ದಾಖಲಿಸತಕ್ಕದ್ದು.
24. ಸದರಿ ಫಿಸಿಯೋಥೆರಪಿ ಕಾಲೇಜಿನ ಸಂಯೋಜನೆ/ಮಂಜೂರಾತಿ ಬಗ್ಗೆ ಕಾಲಕಾಲಕ್ಕೆ ರಾಜ್ಯ ಸರ್ಕಾರ/ವಿಶ್ವವಿದ್ಯಾಲಯ/ಇತರೆ ಸಂಬಂಧಪಟ್ಟ ಪ್ರಾಧಿಕಾರಗಳ ಹೊರಡಿಸುವ ಸುತ್ತೋಲೆ/ಆದೇಶ/ನಿಯಮಗಳು/ಅಧಿಸೂಚನೆ /ವಿನಿಯಮಗಳು / ಅಧಿನಿಯಮಗಳಲ್ಲಿನ ಮಾರ್ಗಸೂಚಿಯನ್ನು ಕಟ್ಟುನಿಟ್ಟಾಗಿ ಪಾಲಿಸಿರುವ ಬಗ್ಗೆ ವಿಶ್ವವಿದ್ಯಾಲಯವು ಖಚಿತಪಡಿಸಿಕೊಳ್ಳತಕ್ಕದ್ದು. ಉಲ್ಲಂಘನೆಯಾದ್ದಲ್ಲಿ ಅಥವಾ ತಪ್ಪು ಮಾಹಿತಿ ನೀಡಿದ್ದಲ್ಲಿ, ಸಂಬಂಧಪಟ್ಟ ಫಿಸಿಯೋಥೆರಪಿ ಕಾಲೇಜು, ಸಂಬಂಧಪಟ್ಟ ಟ್ರಸ್ಟ್/ಸಂಸ್ಥೆ/ಸಂಘ/ಇತ್ಯಾದಿಗಳ ಮೇಲೆ ಮತ್ತು ತಪಾಸಣಾ/ಶಿಫಾರಸ್ಸು ತಂಡದ ಸದಸ್ಯರ ಮೇಲೆ ವಿಶ್ವವಿದ್ಯಾಲಯವು ಕಾನೂನುಕ್ರಮ ಜರುಗಿಸತಕ್ಕದ್ದು.
25. MPT Sports Sciences ಕೋರ್ಸ್ ಮತ್ತು ಇತರೆ ಎಲ್ಲಾ ಎಂ.ಪಿ.ಟಿ. ಕೋರ್ಸುಗಳಲ್ಲಿ ಕಡ್ಡಾಯವಾಗಿ ಅರ್ಹ ಮಾನವ ಸಂಪನ್ಮೂಲ ಲಭ್ಯವಿರುವ ಬಗ್ಗೆ ಖಚಿತಪಡಿಸಿಕೊಳ್ಳತಕ್ಕದ್ದು.
26. ಅರ್ಹ ಫಿಸಿಯೋಥೆರಪಿ ಸಿಬ್ಬಂದಿಯನ್ನು ಕಾಲೇಜಿನ ಪ್ರಾಂಶುಪಾಲರನ್ನಾಗಿ ನೇಮಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಮುತ್ತುರಾಜು ಎಂ.ಎನ್.)
ಸರ್ಕಾರದ ಅಧೀನ ಕಾರ್ಯದರ್ಶಿ-2,
ವೈದ್ಯಕೀಯ ಶಿಕ್ಷಣ ಇಲಾಖೆ,

**ಇವರಿಗೆ:**

1. ಕುಲಸಚಿವರು, ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ 4ನೇ ಟಿ ಬ್ಲಾಕ್ ಜಯನಗರ, ಬೆಂಗಳೂರು.
2. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಬಿಎಂಸಿಆರ್‌ಐ ಹಳೆ ಕಟ್ಟಡ, ಕೆ.ಆರ್ ರಸ್ತೆ, ಬೆಂಗಳೂರು.
3. ಪ್ರಾಂಶುಪಾಲರು/ಕಾರ್ಯದರ್ಶಿ/ಅಧ್ಯಕ್ಷರು, Vydehi Institute of Physiotherapy, No. 82, EPIP Area, Nallurahalli, Whitefield, Bengaluru-560066.

4. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

**ಪ್ರತಿ ಮಾಹಿತಿಗಾಗಿ**:

1. ಮಾನ್ಯ ವೈದ್ಯಕೀಯ ಶಿಕ್ಷಣ, ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವೈದ್ಯಕೀಯ ಶಿಕ್ಷಣ, ಬೆಂಗಳೂರು.
3. ಸರ್ಕಾರದ ಜಂಟಿ ಕಾರ್ಯದರ್ಶಿರವರ ಆಪ್ತ ಸಹಾಯಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಬೆಂಗಳೂರು.